**O. S. 17/2022** **DW - 1**

**ಪ್ರಮಾಣೀಕರಿಸಲಾದ ದಿನಾಂಕಃ 11.02.2026.**

**ಪಾಟೀ ಸವಾಲು ವಾದಿ ಪರ ಶ್ರೀಮತಿ ಬಿ. ಯು. ಪಿ. ವಕೀಲರಿಂದಃ**

ವಾದಿ ನನ್ನ ಅಕ್ಕ ಎಂದರೆ ಸರಿ. ವಾದಿಯ GPA holder ಅವರ ಮಗ ಎಂದರೆ ಸರಿ. 7 ಜನ ಗಂಡು, 3 ಜನ ಹೆಣ್ಣು ಮಕ್ಕಳು ನಮ್ಮ ತಂದೆ ತಾಯಿಗೆ ಇರುತ್ತೇವೆ. ದಿ. 10.06.1995 ರಲ್ಲಿ ನನ್ನ ತಂದೆ Partition Mahazar ಮಾಡಿದ್ದಾರೆ ಎಂದರೆ ಸರಿ. ಈ ಮಹಜರ್ ನಂತೆ ನಾವು ಗಂಡು ಮಕ್ಕಳು ಅದರಂತೆ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. 3 ಜನ ಹೆಣ್ಣು ಮಕ್ಕಳಲ್ಲಿ ವಾದಿಗೆ ಮಾತ್ರ 1 ಎಕರೆ ಕೊಟ್ಟಿದ್ದು ಉಳಿದ ಆಸ್ತಿಯನ್ನು ನಾವು ಗಂಡು ಮಕ್ಕಳು ಹಂಚಿಕೊಂಡಿರುತ್ತೇವೆ.

ಸರ್ವೆ ನಂ. 173/14 ಬಿ ಯಲ್ಲಿ 5 ಎಕರೆ, 173/2 ಬಿ7 ರಲ್ಲಿ 2 ಎಕರೆ, 173/2 ಬಿ8 ರಲ್ಲಿ 2 ಎಕರೆ, 173/ ಡಿ ರಲ್ಲಿ 2 ಎಕರೆ ಗಳಲ್ಲಿ ನಾವು ಸ್ವಾಧೀನದಲ್ಲಿದ್ದೇವೆ. ನಮ್ಮ ಒಟ್ಟು ಆಸ್ತಿ 11 ಎಕರೆ. 173/2 ಮೂಲ ಸರ್ವೆ ನಂಬರ್. Partition Mahazar ನಂತೆ ವಾದಿಗೆ 1 ಎಕರೆ ನೀಡಬೇಕು ಎಂದು ಆಗಿದೆ ಎಂದರೆ ಸರಿ. ಒಂದು ಎಕರೆ ಕೊಟ್ಟಿರುವ ಜಾಗದ ಸರ್ವೆ ನಂ. 173/6 ಎಂದರೆ ಸರಿಯಲ್ಲ. ಆ Partition Mahazar ದಾಖಲೆಗೆ ವಾದಿ ಸಹಿ ಹಾಕಿಲ್ಲ, ಉಳಿದ ಗಂಡು ಮಕ್ಕಳು ಸಹಿ ಹಾಕಿದ್ದಾರೆ ಎಂದರೆ ಸರಿ. ಈ ವಿಭಾಗ ಮಾಡಿಕೊಂಡಿದ್ದಾರೆ ನನ್ನ ತಂದೆ ಇದ್ದರು ಎಂದರೆ ಸರಿ. ಮೊದಲಿಗೆ ವಿಭಾಗವಾದ ನಂತರ ದಾವಾಸ್ತಿ ನನ್ನ ತಂದೆಯ ಸ್ವಾಧೀನದಲ್ಲಿತ್ತು ಎಂದರೆ ಸರಿ. ದಾವಾಸ್ತಿಯನ್ನು ನಾವುಗಳು ಕಂದಾಯ ದಾಖಲೆಗಳು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ, ದಾವಾಸ್ತಿಯ ಚೆಕ್ಕುಬಂದಿ ಮತ್ತು ಸರ್ವೆ ನಂ. ಆಸ್ತಿತ್ವದಲ್ಲಿಲ್ಲ. ದಾವಾಸ್ತಿಯನ್ನು ಗುರುತು ಹಚ್ಚಲು ಮತ್ತು ಸರ್ವೆ ಮಾಡಿಸಲು ನನ್ನ ಅಭ್ಯಂತರವಿಲ್ಲ. ವಾದಿಯ ಮಗನಿಗೆ ಸರ್ವೆ ನಂ. 173/2 ಅನ್ನು ಮಂಜೂರು ಮಾಡಬಾರದೆಂದು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಮ್ಮ ಒಟ್ಟು ಆಸ್ತಿ 11 ಎಕರೆ 37 ಸೆಂಟ್ ಎಂದು ನಮೂದಾಗಿದೆ ಎಂದರೆ ನನಗೆ ಅದರ ವಿಸ್ತೀರ್ಣ ನಿಖರವಾಗಿ ಗೊತ್ತಿಲ್ಲ. ಈ ಅರ್ಜಿಯಲ್ಲಿ ವಾದಿಗೆ ವಿಭಾಗದಲ್ಲಿ ಬಂದಂತಹ ಜಾಗವನ್ನು

ಬಿಟ್ಟುಕೊಡಬೇಕೆಂದು ಹೇಳಿದ್ದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾಧಂ., ಪೊನ್ನಂಪೇಟೆ